
ಇತರ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ, ವೈಜ್ಞಾನಿಕ ಸಂಶೋಧನೆಯ ಸಂಸ್ಥೆ ಹಾಗೂ ಬಾಹ್ಯಾಕಾಶ ಸಂಸ್ಥೆಗಳಲ್ಲಿ, ಅಂತರರಾಷ್ಟ್ರೀಯ ವಿಜ್ಞಾನಿಗಳ ಸಭೆ, ಸಮಾರಂಭಗಳಲ್ಲಿ ಅವರು ಪಾಠ, ಪ್ರವಚನ



ನೀಡಿದರು. ಮಕ್ಕಳ ವಿದ್ಯಾಭ್ಯಾಸ, ಬೆಳವಣಿಗೆಗೆ ಅವರು ವಿಶೇಷ ಪ್ರೋತ್ಸಾಹ ನೀಡಿದ್ದರು. ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ, ಅವರ ವೈಜ್ಞಾನಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುವ ವಿಷಯದಲ್ಲಿ ಅವರು ವಿಶೇಷ ಕಾಳಜಿ ಹೊಂದಿದ್ದರು. ವಿದ್ಯಾರ್ಥಿಗಳನ್ನು ಕುರಿತು ವಿಶೇಷ ಪ್ರೀತಿ ಹೊಂದಿದ್ದ ಡಾ. ಕಲಾಂ ನಿಧನ ಹೊಂದಿದಾಗ ಸಹಸ್ರಾರು ಮಂದಿ ವಿದ್ಯಾರ್ಥಿಗಳು ದೇಶದಾದ್ಯಂತ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಬೇರೆ ಯಾವ ರಾಜಕೀಯ ಧುರೀಣರಿಗೂ ಸಲ್ಲದ ಅಪೂರ್ವ ಶ್ರದ್ಧಾಂಜಲಿ ಅದಾಗಿತ್ತು. ಹೀಗೆ ತನ್ನ ದೇಶ, ಜನ, ಸಮಾಜವನ್ನು ಪ್ರೀತಿಸುವ ವಿಶೇಷ ಗುಣ ಡಾ.ಕಲಾಂ ಅವರನ್ನು ಇನ್ನಷ್ಟು ಎತ್ತರೇಕ್ಕೇರುವಂತೆ ಮಾಡಿತು.

## ಆಧ್ಯಾತ್ಮಿಕತೆ

ಡಾ. ಅಬ್ದುಲ್ ಕಲಾಂ ಅವರು ಒಬ್ಬ ಶ್ರೇಷ್ಠ ವಿಜ್ಞಾನಿಯಾಗಿದ್ದರೂ, ಧರ್ಮ, ಆಧ್ಯಾತ್ಮಿಕತೆಗಳನ್ನು ಮೂಢನಂಬಿಕೆಯೆಂದು ತಳ್ಳಿ ಹಾಕುವ ಮನೋಭಾವ ಅವರದಾಗಿರಲಿಲ್ಲ, ಬಾಲ್ಯದಿಂದಲೂ ಧಾರ್ಮಿಕಶ್ರದ್ಧೆ, ಆಧ್ಯಾತ್ಮಿಕ ಪ್ರವೃತ್ತಿ ಅವರಲ್ಲಿ ಬೆಳೆದು ಬಂದಿತ್ತು. ಇಸ್ಲಾಂ ಧರ್ಮಕ್ಕೆ ಸೇರಿದವರಾಗಿದ್ದ ತಮ್ಮ ತಂದೆ, ತಾಯಿ, ಬಂಧುಗಳಲ್ಲಿದ್ದ ಧರ್ಮಶ್ರದ್ಧೆ, ತಮ್ಮ ಧರ್ಮದ ಪರಿಧಿಯಾಚೆಗೂ ವಿಸ್ತರಿಸಿದ್ದ ಅವರುಗಳ ಮಾನವೀಯತೆ – ಅನ್ಯ ಮತಸಹಿಷ್ಣುತೆ, ರಾಮೇಶ್ವರದ ಅರ್ಚಕರ ಒಡನಾಟದಿಂದ ತಂದೆಯವರಲ್ಲಿ ಬೆಳೆದು ಬಂದಿದ್ದ ಹಿಂದೂ ಆಚಾರವಿಚಾರಗಳ ಪರಿಚಯ – ಇವು ಕಲಾಂ ಅವರಲ್ಲೂ ಧಾರ್ಮಿಕ ಸಮನ್ವಯದ ಸ್ವಭಾವವನ್ನು ಬೆಳೆಸಿತ್ತು. ಭಾರತದಲ್ಲಿನ ಎಲ್ಲ ಧರ್ಮಗಳ ತಿರುಳನ್ನು ಅರಿತುಕೊಳ್ಳುವ ಯೋಗ್ಯ ಸಂದರ್ಭ ಗಳು ಡಾ. ಕಲಾಂ ಅವರಿಗೆ ದೊರಕಿತ್ತು; ಅದು ತಮ್ಮ ಪ್ರಗತಿಗೆ, ತಮ್ಮ ಜ್ಞಾನವಿಕಾಸಕ್ಕೆ ಅನವರತವೂ ಸ್ಫೂರ್ತಿ ನೀಡಿದ್ದಾಗಿ ಅವರು ಹಲವೆಡೆ ಹೇಳಿಕೊಂಡಿದ್ದಾರೆ. ಇದರೊಂದಿಗೆ ಹೃಷೀಕೇಶದ ಸ್ವಾಮಿ ಶಿವಾನಂದರು, ಸ್ವಾಮಿ ನಾರಾಯಣ ಸಂಪ್ರದಾಯದ ಪ್ರಮುಖ್ ಮಹಾರಾಜ್ ಇವರ ಸಂಪರ್ಕ ಅವರ ಆಧ್ಯಾತ್ಮಿಕ ಶ್ರದ್ಧೆ ಯನ್ನು ಇನ್ನಷ್ಟು ಗಾಢವಾಗಿಸಿತು. ಹಲವು ಬಾರಿ ರಾಮಕೃಷ್ಣ ಮಿಷನ್ನಿನ ಕೇಂದ್ರವಾದ ಬೇಲೂರು ಮಠಕ್ಕೆ ಅವರು ಭೇಟಿ ನೀಡಿದ್ದಲ್ಲದೆ, ಮಿಷನ್ನಿನ ವಿವಿಧ ಶಾಖಾಕೇಂದ್ರಗಳಲ್ಲಿ, ಹಲವು ವಿದ್ಯಾಸಂಸ್ಥೆಗಳಲ್ಲಿ , ಹಲವು ಕಾರ್ಯಕ್ರಮಗಳಲ್ಲಿ ಭಾಗ ವಹಿಸಿದ್ದಾರೆ. ಆಧ್ಯಾತ್ಮಿ ಕತೆಗೂ ವಿಜ್ಞಾನಕ್ಕೂ ವಿರೋಧವಿಲ್ಲವೆಂದೂ, ಅವು ಪರಸ್ಪರ ಪೂರಕವೆಂಬುದನ್ನೂ ಡಾ. ಅಬ್ದುಲ್ ಕಲಾಂ ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು.

'ಎಸ್.ಎಲ್.ವಿ.' ಸರಣಿಯ ಬಾಹ್ಯಾಕಾಶ ನೌಕೆಗಳ, 'ತ್ರಿಶೂಲ್', 'ಅಗ್ನಿ' ಮೊದಲಾದ ಕ್ಷಿಪಣಿಗಳ ರೂವಾರಿಯಾಗಿ ಕಾರ್ಯನಿರ್ವಹಿಸಿ ಭಾರತದ ಯಶಸ್ಸನ್ನು ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಗೆ ಕೊಂಡೊಯ್ದ ಡಾ.ಕಲಾಂ ಅವರು ಒಬ್ಬ ಶ್ರೇಷ್ಠ ಭಾರತೀಯನಾಗಿ, ಶ್ರೇಷ್ಠ ವಿಜ್ಞಾನಿಯಾಗಿ ಪ್ರಮುಖರಾಗುವಂತೆ, ಒಬ್ಬ ಆಧ್ಯಾತ್ಮಿಕ ಅನ್ವೇಷಕರಾಗಿಯೂ ಮುಖ್ಯರಾಗುತ್ತಾರೆ. ಅವರ ಜೀವನ ಮುಂದಿನ ಪೀಳಿಗೆಯ ಜನತೆಗೆ ಅಪರಿಮಿತ ಸ್ಫೂರ್ತಿ, ಪ್ರೇರಣೆ ತುಂಬಲಿ ಎಂದು ಆಶಿಸುತ್ತಾ, ಡಾ.ಕಲಾಂ ಅವರಿಗೆ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ✤

### ಒಂದು ವಿಶೇಷ ಘಟನೆ

''ನನ್ನ ಕುಟುಂಬದಲ್ಲಿ ನಡೆದ ಘಟನೆ ಇದು. ನನ್ನ ಅಜ್ಜ, ಮುತ್ತಜ್ಜಂದಿರು ರಾಮೇಶ್ವರದ 'ರಾಮರ್ ತೀರ್ಥಂ' ಎಂಬ ಕೊಳದಲ್ಲಿ ರಾಮ, ಸೀತೆಯರ ಕಲ್ಯಾಣ ಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ದೇವರ ಅಲಂಕೃತವಾದ ವಿಗ್ರಹವನ್ನು ಹೊತ್ತೊಯ್ಯುವ ದೋಣಿಯನ್ನು ಸಿದ್ಧಪಡಿಸುತ್ತಿದ್ದರು. ಒಂದು ಬಾರಿ ಉತ್ಸವ ನಡೆಯುತ್ತಿದ್ದಾಗ ವಿಗ್ರಹ ನೀರಿನಲ್ಲಿ ಮುಳುಗಿಹೋಯಿತು. ನನ್ನ ಮುತ್ತಜ್ಜ ಸ್ವಲ್ಪವೂ ಅಳುಕದೆ ಕೊಳದಲ್ಲಿ ಮುಳುಗಿ, ವಿಗ್ರಹವನ್ನು ಮೇಲಕ್ಕೆತ್ತಿ ತಂದರು. ದೇವಸ್ಥಾನದ ಅರ್ಚಕರು ನನ್ನ ಕುಟುಂಬಕ್ಕೆ 'ಮುದಲ್ ಮರಿಯಾದೈ' (ಮೊದಲ ಗೌರವ) ಸಲ್ಲಿಸಿದರು. ವಿಗ್ರಹ ಸಿಗುವಂತಾಗಲು ರಾಮೇಶ್ವರದ ಮಸೀದಿಯಲ್ಲೂ ವಿಶೇಷ ಪ್ರಾರ್ಥನೆ ಸಲ್ಲಿಸಲಾಗಿತ್ತು. ಈ ಘಟನೆ ಮಾನವ ಸಹೋದರತ್ವದ, ಸಮನ್ವಯದ ಒಂದು ಉಜ್ಜ್ವಲ ಉದಾಹರಣೆಯಂದೇ ನನಗೆ ಯಾವಾಗಲೂ ಅನ್ನಿಸಿದೆ – ವಿಶೇಷವಾಗಿ ಇಂದಿನ ಸನ್ನಿವೇಶಗಳಲ್ಲಿ.''

**–ಡಾ. ಎ.ಪಿ.ಜೆ. ಅಬ್ದುಲ್ ಕಲಾಂ,** *Ignited Minds, p.95*



# ಅಮರನಾಥನ ಸನ್ನಿಧಿಯತ್ತ

ಸ್ವಾಮಿ ಜ್ಞಾನಯೋಗಾನಂದ

ಅಮರನಾಥ ಯಾತ್ರೆಯನ್ನು ಎರಡು ದಾರಿಗಳಿಂದ ಮಾಡಬಹುದು. ಪಹಲ್‌ಗಾಮ್‌ನಿಂದ ಆರಂಭಿಸಿ, ಚಂದನವಾಡಿ-ಶೇಷನಾಗ-ಪಂಚತರಣಿ ಮೂಲಕ ಹೋಗುವುದು ಒಂದು ದಾರಿ; ಬಾಲ್‌ತಾಲ್‌ನಿಂದ ಆರಂಭಿಸಿ ನೇರ ಅಮರನಾಥ ಗುಹೆಯನ್ನು ತಲುಪುವುದು ಇನ್ನೊಂದು ದಾರಿ. ಮೊದಲನೆಯ ದಾರಿಯ ಮೂಲಕ ಅಮರನಾಥಕ್ಕೆ ಹೋಗಿ, ಭಗವಂತನ ದರ್ಶನ ಮಾಡಿಕೊಂಡು, ಎರಡನೆಯ ದಾರಿಯ ಮೂಲಕ ಹಿಂದಿರುಗುವುದು ಸಾಂಪ್ರದಾಯಿಕ ಯಾತ್ರೆಯ ಕ್ರಮ. ಕಾರಣ, ಬಾಲ್‌ತಾಲ್‌ನಿಂದ ಯಾತ್ರೆ ಹೋಗುವುದು ಅತ್ಯಂತ ಕಷ್ಟಕರ; ಹದಿನಾಲ್ಕೇ ಕಿ.ಮೀ. ದೂರವಾದರೂ, ದಾರಿ ಅತ್ಯಂತ ಕಡಿದು. ನಿಧಾನವಾಗಿ ಏರುತ್ತ ಹೋಗುವ ಪರ್ವತ ಕಣಿವೆಯ ಹಾದಿ; ಎಲ್ಲೂ ಇಳಿಜಾರೇ ಇಲ್ಲದೆ ಒಂದೇ ಸಮನೆ ಏರುತ್ತದೆ. ಯಾತ್ರಿಗಳು ಅರ್ಧದಾರಿಯಲ್ಲೇ ಅರೆಜೀವವಾಗಿಬಿಡುತ್ತಾರೆ. ಪಹಲ್‌ಗಾಮ್ ಮೂಲಕ ಯಾತ್ರೆ ಆರಂಭಿಸಿದರೆ ಕೆಲವು ಅನುಕೂಲತೆಗಳಿವೆ. ಒಂದು, ದಾರಿ ಒಂದೇ ಸಮನೆ ಏರುವುದಿಲ್ಲ; ಏರಿದಂತೆ ಇಳಿದೂ ಸಾಗಬೇಕಾಗುತ್ತದೆ. ೩೬ ಕಿ.ಮೀ ದೂರ ನಡೆಯಬೇಕು; ಶೇಷನಾಗದಲ್ಲಿ ಒಂದು ರಾತ್ರಿ ತಂಗಿ, ಮರುದಿನ ಯಾತ್ರೆ ಮುಂದುವರೆಸಬಹುದು. ಇಲ್ಲಿ ಆಯಾಸ ಕಡಿಮೆ. ಎರಡು, ಶೇಷನಾಗ, ಪಂಚತರಣಿ ಹಾಗೂ ನಡುನಡುವೆ ಸಿಗುವ ಪರ್ವತ, ಕಣಿವೆ, ಸರೋವರ, ತೊರೆಗಳ ದೃಶ್ಯಗಳು ಅಸಾಧಾರಣ ಸೌಂದರ್ಯದಿಂದ ಕೂಡಿವೆ. ಬಾಲ್‌ತಾಲ್‌ನಿಂದ ಯಾತ್ರೆ ಮರಳುವಾಗ ಇಳಿಜಾರಿನಲ್ಲಿ ಇಳಿಯುತ್ತ ಹೋಗುವುದರಿಂದ ಹೆಚ್ಚು ಆಯಾಸವಿಲ್ಲ; ಬೇಗನೆ ಮರಳುತ್ತೇವೆ. ಹೀಗಾಗಿ ನಾವು ಸಾಂಪ್ರದಾಯಿಕ ದಾರಿಯಲ್ಲೇ ಹೋಗುವುದೆಂದು ನಿಶ್ಚಯಿಸಿದೆವು.

ನಾವು ಆರು ಮಂದಿ ಸಾಧುಗಳು, ರಾಮಕೃಷ್ಣ ಮಿಷನ್‌ನ ವಿವಿಧ ಶಾಖಾಕೇಂದ್ರಗಳಿಂದ ಬಂದವರು ಜಮ್ಮುವಿನಲ್ಲಿ ಒಟ್ಟಾಗಿದ್ದೆವು. ಒಬ್ಬರು ಖಾಸಗಿ ಆಶ್ರಮದ ಸಾಧುಗಳೂ ನಮ್ಮೊಡನೆ ಇದ್ದರು. ಎಲ್ಲರೂ ಕನ್ನಡಿಗರೇ.

ಬಹಳ ಮಂದಿ ಯಾತ್ರಿಕರು ಜಮ್ಮುವಿನಿಂದ ನೇರ ಪಹಲ್‌ಗಾಮ್‌ಗೆ ಹೋಗಿ, ಅಲ್ಲಿಂದ ಯಾತ್ರೆ ಆರಂಭಿಸುತ್ತಾರೆ. ಆದರೆ ನಾವು ಮೊದಲು ಶ್ರೀನಗರಕ್ಕೆ ಹೋಗಿ, ಅಲ್ಲಿನ ರಾಮಕೃಷ್ಣ ಮಿಷನ್ ಕೇಂದ್ರದಲ್ಲಿ ನಮ್ಮ ಪ್ರಧಾನ ಲಗ್ಗೇಜುಗಳನ್ನು ಇಟ್ಟು, ಅಗತ್ಯವಾದ ಕೆಲವೇ ವಸ್ತುಗಳನ್ನು ಸಣ್ಣ ಬ್ಯಾಗ್‌ನಲ್ಲಿ ಹಾಕಿಕೊಂಡು ಪಹಲ್‌ಗಾಮ್‌ಗೆ ಹೋಗುವುದೆಂದು ನಿಶ್ಚಯಿಸಿದೆವು. ಬಾಲ್‌ತಾಲ್‌ನಿಂದ ಮರಳಿ ಬಂದು, ಮತ್ತೆ ಶ್ರೀನಗರಕ್ಕೆ ಹೋಗಿ, ಅಲ್ಲಿನ ಸ್ಥಳಗಳನ್ನು ನೋಡಬೇಕೆಂದು ನಾವು ಮೊದಲೇ ಯೋಜನೆ ಹಾಕಿಕೊಂಡಿದ್ದೆವು. ೨೦೧೫ರ ಜುಲೈ ೯ರಂದು ಶ್ರೀನಗರದಿಂದ ಒಂದು ವಾಹನ ಬಾಡಿಗೆ ಮಾಡಿಕೊಂಡು ಪಹಲ್‌ಗಾಮ್‌ಗೆ ಬಂದೆವು. ಅಲ್ಲಿ ಒಂದು ಖಾಸಗಿ ಬಿಡಾರ ('ಹೋಟೆಲ್' ಅನ್ನಬಹುದೇನೋ!) ದಲ್ಲಿ ತಂಗಿ, ಮರುದಿನ ಬೆಳಗ್ಗೆ ಐದಕ್ಕೆ ಮೊದಲೇ ಕಾರಿನಲ್ಲಿ ಚಂದನವಾಡಿಗೆ ಹೊರಟೆವು. ನಮ್ಮ ನೋಂದಣಿ ಪತ್ರಗಳನ್ನು ತೋರಿಸಿ, ಅಲ್ಲಿಂದಲೇ ನಮ್ಮ ಯಾತ್ರೆ ನಿಜವಾಗಿ ಆರಂಭವಾಗಬೇಕು.

## ಮಳೆರಾಯನ ಕಾಟ

ನಾವು ಕಾರಿನಲ್ಲಿ ಚಂದನವಾಡಿಗೆ ಹೊರಟು, ದಾರಿ ಮಧ್ಯೆ ಒಂದೆಡೆ ನಿಲ್ಲಿಸಬೇಕಾಯಿತು. ಗೇಟ್ ಬಳಿ ವಾಹನಗಳು ಕ್ಯೂ ನಿಂತಿದ್ದವು. ಆಗಲೇ ಜಿಟಿಜಿಟಿ ಮಳೆ ಆರಂಭವಾಯಿತು. ಮಿಲಿಟರಿ, ಪೋಲಿಸ್ ಸಿಬ್ಬಂದಿಗಳು ನಮ್ಮ ನೋಂದಣಿ ಪತ್ರ ನೋಡಿ, ಅದರ ಒಂದು ತುಂಡನ್ನು ತಮ್ಮ ಬಳಿ ಇಟ್ಟುಕೊಂಡು, ನಮ್ಮನ್ನು ಒಳಗಡೆ ಬಿಟ್ಟರು. ನೂರಾರು, ಸಾವಿರಾರು ಜನರ ನಡುವೆ ನಾವೂ ತೂರಿಕೊಂಡು ಯಾತ್ರೆ ಆರಂಭಿಸುವ ಉತ್ಸಾಹದಿಂದ 'ಲಂಗರ್'ಗಳಿದ್ದಲ್ಲಿಗೆ ಬಂದೆವು. (ಉಚಿತ ಊಟ, ತಿಂಡಿ ಆಹಾರ ಒದಗಿಸುವ ಸೇವಾ ಕೌಂಟರ್‌ಗಳೇ 'ಲಂಗರ್' ಗಳು. ಅಲ್ಲಿ ಕೆಲವಡೆ ತಂಗಲು ವ್ಯವಸ್ಥೆಯೂ ಇರುತ್ತದೆ.) ಮಳೆ ತುಸು ಜೋರಾಗಿದ್ದರಿಂದ ಲಂಗರ್ ನೊಳಗೆ ನುಗ್ಗಿ, ಜನರ ನಡುವೆ ಸ್ಥಳ ಮಾಡಿಕೊಂಡು, ಮೊದಲು ತಿಂಡಿ ತಿಂದೆವು. ಬಿಸಿ ಬಿಸಿ ಚಪಾತಿ, ಪಲ್ಯ, ಇಡ್ಲಿ, ಉತ್ತಪ್ಪ, ಖೀರು, ಸಿಹಿತಿಂಡಿ ಏನು ಬೇಕಾದರೂ ಸಿಗುತ್ತದೆ. 'ಬಂಬಂ ಬಾಬಾ'ನನ್ನು ನೆನೆದುಕೊಂಡೇ ಎಲ್ಲ ಯಾತ್ರಿಕರಿಗೂ ಉಚಿತ ಆಹಾರ ನೀಡಿ ಸೇವೆ ಮಾಡುತ್ತಾರೆ. ಅವರ ಶ್ರದ್ಧೆ, ಸೇವಾಭಾವಗಳನ್ನು ನೋಡಿ ಹೃದಯ ತುಂಬಿ ಬಂತು.

ತಿಂಡಿ ತಿಂದ ಬಳಿಕ ನಮ್ಮ ನಮ್ಮ ಲಗೇಜು, ಲಾಠಿ ಮೊದಲಾದವನ್ನೆಲ್ಲ ಒಂದೆಡೆ ಇಟ್ಟು ಕಾಯುತ್ತ ಕುಳಿತೆವು. ಮಳೆ ನಿಂತಲ್ಲದೆ ಯಾತ್ರೆ ಆರಂಭವಾಗುವಂತಿಲ್ಲ. ಬೆಳಿಗ್ಗೆ ಆರುಗಂಟೆಗೆ ಆರಂಭವಾದ ಮಳೆ ಹನ್ನೊಂದು-ಹನ್ನೆರಡರವರೆಗೂ ಮುಂದುವರಿಯಿತು. ಇನ್ನು ಯಾತ್ರೆ ಆರಂಭವಾಗದು ಎಂದು ಎಲ್ಲರಿಗೂ ಖಾತ್ರಿಯಾಯಿತು. ಯಾತ್ರೆ ಮುಗಿಸಿ ಮರಳಿ ಬಂದ ಕೆಲವರು, 'ಇಂದು ಖಂಡಿತ ಹೋಗಬೇಡಿ! ಮೊಣಕಾಲು ತನಕ ಕೆಸರು, ಕೊಚ್ಚೆ ಇದೆ. ಹಿಮದ ಮೇಲೆ ನಡೆಯುವಾಗ ಜಾರಿ ಬೀಳುತ್ತೀರಿ. ನಾಳೆಯವರೆಗೆ ಕಾದರೂ ಪರವಾಗಿಲ್ಲ, ಸುರಕ್ಷಿತವಾಗಿ ಹೋಗಿ' ಎಂದರು. ನಾವು ಅಲ್ಲೇ ತಂಗುವ ವ್ಯವಸ್ಥೆ ಮಾಡಿಕೊಳ್ಳಲು ಪರದಾಡಿದೆವು. ಕೊನೆಗೆ 'ಭಾರತ ಸೇವಾಶ್ರಮ ಸಂಘ'ದವರು ನಮ್ಮನ್ನು ಗುರುತಿಸಿ, 'ಸ್ವಾಮೀಜಿ, ನಮ್ಮಲ್ಲಿಗೇ ಬಂದುಬಿಡಿ, ಇಲ್ಲೇ ತಂಗಬಹುದು' ಎಂದು ನಮಗೆ ಒಳ್ಳೆಯ ಸ್ಥಳ ನೀಡಿದರು. ಹೀಗಾಗಿ ಅಂದು ರಾತ್ರಿ ಚಂದನವಾಡಿಯಲ್ಲೇ ತಂಗಿದೆವು.

ಹಿಮಾಲಯದಲ್ಲಿ ಕ್ಷಣಕ್ಷಣವೂ ಹವೆ ಬದಲಾಗುತ್ತದೆ. ಈ ಕ್ಷಣ ಒಣ ಬಿಸಿಲಿದ್ದರೆ, ಮುಂದಿನ ಕ್ಷಣ ಮೋಡಗಳೇಳುತ್ತವೆ, ತಂಗಾಳಿ ಬೀಸಿ ಬಂದು ಮಳೆ ಆರಂಭವಾಗುತ್ತದೆ. ಮಳೆ ಅತಿಯಾದರೆ ಪರ್ವತ ಕುಸಿತ, ನೆರೆ, ಅನಾಹುತಗಳಾಗುವ ಸಂಭವವೂ ಇದೆ. (ಈ ವರ್ಷವೇ ನಾವು ಮರಳಿ ಬಂದ ನಂತರ ಅಮರನಾಥ ಯಾತ್ರೆಯ ನಡುವೆ ಪರ್ವತ ಕುಸಿತ, ಮೇಘಸ್ಫೋಟ ಉಂಟಾಗಿ ಕೆಲವರು ಜೀವ ಕಳೆದುಕೊಂಡರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.) ತೀರ ಅನಾಹುತವುಂಟಾದರೆ ಅಮರನಾಥ ಯಾತ್ರೆ ನಿಲ್ಲಿಸಿಬಿಡಬಹುದೇನೋ ಎಂಬ ಭಯವೂ ನಮ್ಮನ್ನು ಕಾಡುತ್ತಿತ್ತು. ಆದರೂ 'ಎಲ್ಲವೂ ಅಮರನಾಥನ ಇಚ್ಛೆ' ಎಂದು ಸಮಾಧಾನ ತಂದುಕೊಳ್ಳುತ್ತಿದ್ದೆವು. 'ನಾಳೆ ಮಳೆಯಿಲ್ಲದಿದ್ದರೆ ಬೆಳಿಗ್ಗೆ ಐದುಗಂಟೆಗೇ ಹೊರಟು, ಶೇಷನಾಗ ದಾಟಿ, ಸಾಯಂಕಾಲದ ಹೊತ್ತಿಗೆ ಪಂಚತರಣಿಯನ್ನೇ ತಲುಪಬಹುದು; ನೀವೆಲ್ಲ ಗಟ್ಟಿಮುಟ್ಟಾಗಿದ್ದೀರಿ. ಮಳೆ ಬಂದು ಅಲ್ಲಲ್ಲಿ ಯಾತ್ರೆ ಸ್ಥಗಿತವಾಗುತ್ತಿದೆ. ಆದಷ್ಟು ಬೇಗನೆ ಅಲ್ಲಿಗೆ ತಲುಪಿಬಿಡಬಹುದಲ್ಲ!' ಎಂದರು ಭಾರತ ಸೇವಾಶ್ರಮದ ಸ್ವಾಮೀಜಿ. ಅವರ ಸಲಹೆಯಂತೆ ಮರುದಿನ (ಜುಲೈ ೧೧) ಬೆಳಿಗ್ಗೆ ಐದಕ್ಕೇ ನಾವು ಹೊರಟು ನಿಂತೆವು.

## ಉತ್ಸಾಹದ ಪಿಸು ಟಾಪ್

ಯಾತ್ರೆಯ ಆರಂಭದಲ್ಲಿ ಉತ್ಸಾಹ ಹೇಳತೀರದು. ಚಂದನವಾಡಿಯಿಂದ ಹೊರಟರೆ, ಮೊದಲು ಸಿಗುವ ಬೆಟ್ಟವೇ 'ಪಿಸು ಟಾಪ್.' ಅತ್ಯಂತ ಕಡಿದಾದ ಬೆಟ್ಟವಿದು; ಆದರೆ ಇನ್ನೂ ಹೆಚ್ಚು ಆಯಾಸವಾಗಿರಲಿಲ್ಲ; ಜೊತೆಗೆ ನಮ್ಮ ಉತ್ಸಾಹವೂ ಸೇರಿಕೊಂಡು ಹೆಚ್ಚು ಶ್ರಮವಿಲ್ಲದೆ ಪಿಸುಟಾಪ್ ತಲುಪಿದೆವು. ಸುಮಾರು ಎಂಟು ಗಂಟೆಗೆ ಬೆಟ್ಟದ ಮೇಲಿದ್ದೆವು. ಆಗಲೇ ಯಾತ್ರಿಕರು, ಕುದುರೆಗಳು, 'ಪಾಲಕಿ' (ನಡೆಯಲಾಗದವರು, ವೃದ್ಧರು, ಮಹಿಳೆಯರು ಇವರನ್ನೆಲ್ಲ ಪಲ್ಲಕ್ಕಿಯಲ್ಲಿ ನಾಲ್ಕು ಜನ ಹೊತ್ತುಕೊಂಡು ಹೋಗುತ್ತಾರೆ) ಇವರೆಲ್ಲ ನಮ್ಮೊಂದಿಗೆ ನಡೆದು ಬರುತ್ತಿದ್ದರು. ಯಾರು ಮುಖಾಮುಖಿಯಾದರೂ **'ಜೈ ಬೋಲೇ'**, **'ಬಂ ಬಂ ಬೋಲೇ'**, **'ಹರಹರ ಮಹಾದೇವ್'** ಎನ್ನುತ್ತಿದ್ದರು. ಯಾತ್ರಿಕರ ನಡುವೆ ಇದೇ ಅವ್ಯಕ್ತ ಸ್ನೇಹದ ಬಂಧನ. ವಿಭಿನ್ನ ಪ್ರದೇಶ, ವಿಭಿನ್ನ ಸಂಸ್ಕೃತಿ, ಬೇರೆ ಬೇರೆ ಭಾಷೆ-ಆಚಾರ ವಿಚಾರ; ಆದರೆ ಭಾವ ಮಾತ್ರ ಒಂದೇ. ಭಾರತದ 'ವಿವಿಧತೆಯಲ್ಲಿ ಏಕತೆ' ನಿಜವಾಗಿ ವ್ಯಕ್ತವಾಗುವುದು ಇಲ್ಲೇ.



'ಪಿಸು ಟಾಪ್' ನತ್ತ

ಪಿಸುಟಾಪ್ ತಲುಪುವಷ್ಟರಲ್ಲೇ ನಮ್ಮ ಗುಂಪಿನವರೆಲ್ಲ ಬೇರೆ ಬೇರಾಗಿದ್ದರು. ಬೆಟ್ಟದ ತುದಿಯಲ್ಲಿದ್ದ ಲಂಗರ್‌ಗಳಲ್ಲಿ ಕೆಲವರು ಸಿಕ್ಕಿದರು; ಆದರೆ ನಮ್ಮ ತಿಂಡಿಯಾಗುವಷ್ಟರಲ್ಲೇ ಅವರೆಲ್ಲ ಮುಂದಕ್ಕೆ ಹೊರಟರು. ನಾನು ಮತ್ತು ತೋತಾಪುರಿ ಮಹಾರಾಜ್ (ಖಾಸಗಿ

ಆಶ್ರಮದ ಸ್ವಾಮೀಜಿ) ಜೊತೆಯಲ್ಲೇ ಇದ್ದೆವು. ಪಿಸುಟಾಪ್‌ನಿಂದ ಮುಂದಕ್ಕೆ ಬೆಟ್ಟವಿಳಿಯುತ್ತಾ ಸಾಗಬೇಕು; ಇಳಿಜಾರು ದಾರಿಯೇ ಅಧಿಕಭಾಗ. ಸುಂದರವಾದ ಕಣಿವೆ, ನಡುನಡುವೆ ಹಿಮಾಚ್ಛಾದಿತ ಶಿಖರಗಳ ದರ್ಶನ, ಹಿಮಗಡ್ಡೆಗಳ ನಡುವಿನಿಂದ ತೂರಿಬರುತ್ತಿರುವ ಝುರಿಗಳು, ಹಸಿರು ಹುಲ್ಲಿನ ಇಳಿಜಾರು, ಹೀಗೆ ಅಲ್ಲಿನ ಸೌಂದರ್ಯವನ್ನು ವರ್ಣಿಸಲಾಗದು. ಹೀಗೆ ಬಹುದೂರ ಸಾಗಿದ ಮೇಲೆ ದೂರದಲ್ಲೊಂದು ಸರೋವರ ಕಾಣಿಸಿತು. ಅದೇ '**ಶೇಷನಾಗ.**'

**ಹಸಿರು ನೀರಿನ ಸರೋವರ – ಶೇಷನಾಗ**

ಸುತ್ತಲೂ ಹಿಮಕವಿದ ಪರ್ವತಗಳು, ತಗ್ಗಿನಲ್ಲಿ ಹಸಿರು ಬಣ್ಣದ ನೀರಿನ ಸರೋವರ. ಅದೆಂಥ ಚೆಲುವು ಆ ಪ್ರದೇಶದ್ದು! ನೋಡಿದಷ್ಟೂ ನೋಡುತ್ತಿರಬೇಕು ಅನ್ನಿಸುತ್ತದೆ. ಪೌರಾಣಿಕ ಕಥೆಗಳ ಹಿನ್ನೆಲೆಯಿರುವ ಈ ಸರೋವರದಲ್ಲಿ ಸ್ನಾನ ಮಾಡಬೇಕು ಎನ್ನುತ್ತಾರೆ. ಆದರೆ ನಾವು ಅಲ್ಲಿ ತಂಗದೆ, ಪಂಚತರಣಿಯ (ಅಮರನಾಥಕ್ಕೆ ಅತ್ಯಂತ ಹತ್ತಿರದ ಕ್ಯಾಂಪ್) ವರೆಗೂ ಅಂದೇ ಹೋಗಬೇಕು ಎಂದು ನಿರ್ಧರಿಸಿದ್ದರಿಂದ, ಸ್ನಾನ ಮಾಡುವ ಸಂಭವವೇ ಇರಲಿಲ್ಲ. ಶೇಷನಾಗ ಸರೋವರ ದಾಟಿ, ಲಂಗರ್‌ಗಳೆಲ್ಲ ಇರುವ ಸ್ಥಳ ಬಂದಾಗ ಅಲ್ಲಿ ನಮ್ಮವರೆಲ್ಲರೂ ಸಿಕ್ಕಿದರು. ಪ್ರಕಾಶ್ ಮಹಾರಾಜ್ ಮಾತ್ರ ಬೇಗನೆ ಊಟ ಮಾಡಿ ಕುದುರೆಯ ಮೂಲಕ ಬೇಗನೆ ಯಾತ್ರೆ ಮುಂದುವರಿಸಿದ್ದರು. ಉಳಿದವರೆಲ್ಲ ಲಂಗರ್‌ನಲ್ಲಿ ಊಟಮಾಡಿ ನಮಗಾಗಿ ಕಾಯುತ್ತಿದ್ದರು. ನಾವೂ ಊಟಮಾಡಿ ಬಂದೆವು. ಮುಂದಿನ ಯಾತ್ರೆ ಹೇಗೆ ಎಂಬ ಚರ್ಚೆ ನಡೆಯಿತು. ಈಗಾಗಲೇ



ಶೇಷನಾಗ ಸರೋವರ

ಸಾಕಷ್ಟು ಆಯಾಸಗೊಂಡಿದ್ದರಿಂದ ಧರ್ಮವ್ರತಾನಂದಜಿ, ನವದುರ್ಗಾನಂದಜಿ ಕುದುರೆ ಗೊತ್ತುಮಾಡಿಕೊಂಡರು. ನಾನು, ಸುನಿಶ್ಚಲಾನಂದಜಿ (ವೇಣು ಮಹಾರಾಜ್), ತೋತಾಪುರಿ ಹಾಗೂ ಬ್ರಹ್ಮಚಾರಿ ಶಿವಕುಮಾರ್ ನಡೆಯುವುದೆಂದು ತೀರ್ಮಾನಿಸಿದೆವು. ನಮ್ಮೆಲ್ಲರ ಸಣ್ಣ ಚೀಲಗಳನ್ನು ಒಂದೇ ಕುದುರೆಯ ಮೇಲೆ ಹೊರಿಸಿ, ಉಳಿದ ಸ್ವಾಮಿಗಳೊಂದಿಗೆ ಅದನ್ನು ಕಳುಹಿಸಿಕೊಟ್ಟೆವು. ನಾವು ಬರೀ ರೈನ್‌ಕೋಟ್, ಲಾಠಿ ಹಿಡಿದು ಮುಂದುವರಿದೆವು.

ಬಹುಪಾಲು ಯಾತ್ರಿಕರು ಅಂದು ಶೇಷನಾಗದಲ್ಲೇ ತಂಗುತ್ತಾರೆ. ಅದೇ ದಿನ ಅಲ್ಲಿಂದ ಪ್ರಯಾಣ ಮುಂದುವರಿಸುವವರನ್ನು ಮಧ್ಯಾಹ್ನ ಎರಡು ಗಂಟೆಯವರೆಗೆ ಮಾತ್ರ ಬಿಡುತ್ತಾರೆ; ಮುಂದಕ್ಕೆ ಗೇಟ್ ಹಾಕಿಬಿಡುತ್ತಾರೆ ಎಂದು ತಿಳಿದುಬಂತು. ಆಗಿನ್ನೂ ಮಧ್ಯಾಹ್ನ ಒಂದೂವರೆಯಾಗಿತ್ತು. ನಾವು ಲಗುಬಗೆಯಿಂದ ಹೊರಟು, ಗೇಟ್ ದಾಟಿ ಯಾತ್ರೆ ಮುಂದುವರೆಸಿದೆವು. ಮುಂದೆ ಕೆಲವು ಕಡೆ ಹಿಮದ ಮೇಲೆ ನಡೆಯಬೇಕಾಯಿತು. ನೆಲದಂತೆ ಸಲೀಸಾಗಿ ನಡೆಯಲಾಗದೆ, ಕೋಲಿನ ಆಧಾರ ಪಡೆದುಕೊಳ್ಳುತ್ತ, ನಡುನಡುವೆ ಜಾರುತ್ತ ನಡೆದೆವು. ಆದರೆ ಮುಂದಕ್ಕೆ ಕಲ್ಲು, ಬಂಡೆಗಳಿಂದ ಕೂಡಿದ ನೆಲ ಎದುರಾಗಿ, ನಡಿಗೆ ಸುಲಭವಾಯಿತು. ಮುಂದಕ್ಕೆ ನೋಡಿದರೆ, ಕಾಲುನಡಿಗೆಯ ಯಾತ್ರಿಕರು ವಿರಳವಾಗಿದ್ದು, ಕುದುರೆ ಯಾತ್ರಿಕರೇ ಹೆಚ್ಚು ಅನ್ನಬೇಕು. ನಡುವೆ ಒಂದೆರಡು ಬೆಟ್ಟಗಳನ್ನೇರಬೇಕು, ಮತ್ತೆ ಇಳಿಯಬೇಕು; ಅಲ್ಲಲ್ಲಿ ಸುಂದರ ಝುರಿ, ಮಧ್ಯೆ ಹಿಮದ ಮೇಲೆ ನಡಿಗೆ – ಹೀಗೆ ನಮ್ಮ ಯಾತ್ರೆ ಸಾಗಿತು. ದಾರಿಯುದ್ದಕ್ಕೂ 'ಬಂಬಂ ಬೋಲೇ' ಅನವರತವೂ ಕೇಳಿಬರುತ್ತಿತ್ತು.

**ಮಹಾಗುಣಾಸ್ ಟಾಪ್ – 'ರಕ್ಷಿಸೋ ಅಮರನಾಥ'!**

ಮುಂದೆ ಮಹಾಗುಣಾಸ್ ಟಾಪ್ (ಗಣೇಶ ಟಾಪ್ ಅಥವಾ ಎಂ.ಜಿ.ಟಾಪ್ ಎಂದೂ ಕರೆಯುತ್ತಾರೆ) ಎಂಬ ಬೆಟ್ಟ ಎದುರಾಗುತ್ತದೆ. ಅದೂ ಕಡಿದಾದ ಏರುದಾರಿ; ಅಲ್ಲಿಯವರೆಗೆ ಕರೆದುಕೊಂಡು ಹೋಗಿಬಿಡುತ್ತೇವೆ ಎಂದು ಕುದುರೆಯವರು ಕೂಗಿ ಕರೆಯುತ್ತಿದ್ದರು. ಆಯಾಸದಿಂದ ನಡೆಯಲಾಗದ ಯಾತ್ರಿಕರು ಕುದುರೆ ಗೊತ್ತುಮಾಡಿಕೊಳ್ಳುತ್ತಿದ್ದರು. ಅದರ ಚಾರ್ಜ್ ಇಷ್ಟೆಂದು ಕುದುರೆಯವನು ಹೇಳುವನು; ಯಾತ್ರಿಕ ಚೌಕಾಶಿ ಮಾಡುತ್ತಾನೆ. ಕೊನೆಗೆ ಇಬ್ಬರಿಗೂ ಒಪ್ಪಂದವಾಗಿ, ಯಾತ್ರಿಕ ಕುದುರೆ ಏರುತ್ತಾನೆ; ಯಾತ್ರೆ ಮುಂದುವರೆಯುತ್ತದೆ. ಇದು ಸರ್ವೇಸಾಮಾನ್ಯ ದೃಶ್ಯ.

ಗಣೇಶ ಟಾಪ್ ಇನ್ನೇನು ಹತ್ತಿರವಾಗುತ್ತಿದೆ ಎನ್ನುವಷ್ಟರಲ್ಲಿ ಹಿಂದಿದ್ದ ಬೆಟ್ಟಗಳ ಸಾಲಿನ ನಡುವಿನಿಂದ ಮೋಡಗಳು ಎದ್ದು ಬರತೊಡಗಿದವು. ಶೀತಲಗಾಳಿ, ಆವರಿಸಿದ ಮೋಡದ ನೆರಳು – ಇವು ಸುತ್ತಣ ಪರಿಸರವನ್ನೇ ಬದಲಾಯಿಸಿತು. ಅಷ್ಟರಲ್ಲಿ ಪರಿಸ್ಥಿತಿಯನ್ನು ಅರಿತ N.D.R.F.(ನ್ಯಾಷನಲ್ ಡಿಸಾಸ್ಟರ್ ರಿಲೀಫ್ ಫೋರ್ಸ್ 'ರಾಷ್ಟ್ರೀಯ ದುರಂತ ಪರಿಹಾರ ದಳ') ನವರು ಯಾತ್ರಿಕರ ಸಮೀಪಕ್ಕೆ ಬಂದು, 'ಮಳೆ ಆರಂಭವಾಗುವ ಸೂಚನೆಯಿದೆ. ಬೇಗ ಬೇಗ ನಡೆಯಿರಿ. ಎಲ್ಲೂ ನಿಲ್ಲಬೇಡಿ. ಏನೇ ಆದರೂ ನೀವು ಪಂಚತರಣಿ ತಲುಪಲೇಬೇಕು' ಎಂದರು. ನಾವು 'ಗಣೇಶ ಟಾಪ್ ಅದೇ' ಎಂದು ಭಾರತದ ಧ್ವಜ ಕಂಡುಬಂದ ಪ್ರದೇಶವನ್ನು ಗುರುತಿಸಿದೆವು. ಆದರೆ ಅದು ಒಂದು ಮಿಲಿಟರಿ ತಂಗುದಾಣವಾಗಿತ್ತು. ಅಷ್ಟರಲ್ಲಿ ಮಳೆ ಜಿನುಗತೊಡಗಿತು. ನಾವು ಭಯ, ಆತಂಕಗಳಿಂದ ಬೇಗಬೇಗನೆ ಹೆಜ್ಜೆ ಹಾಕತೊಡಗಿದೆವು.

ಮುಂದಕ್ಕೆ ಎತ್ತರದಲ್ಲಿ 'ಗಣೇಶ ಟಾಪ್' ಕಾಣಿಸುತ್ತಿತ್ತು. ಅಲ್ಲಿಗೆ ಏರಿಹೋಗುವ ಮುನ್ನ ಹಿಮದ ಮೇಲೆ ನಡೆಯಬೇಕಾಯಿತು. ಪಕ್ಕದಲ್ಲೇ ಒಂದು ತೊರೆ ಹರಿದು ಬರುತ್ತಿತ್ತು. ಅಲ್ಲಲ್ಲಿ ಹಿಮ ಕರಗಿ ನೀರಿನಲ್ಲಿ ಮಂಜುಗಡ್ಡೆಯ ತುಂಡುಗಳು ತೇಲುತ್ತಿದ್ದವು. ನೀರಿಲ್ಲದಲ್ಲಿ ತೊರೆ ದಾಟಿ, ಮುಂದೆ ಕಲ್ಲು, ಬಂಡೆಗಳಿಂದ ತುಂಬಿದ ಬೆಟ್ಟವನ್ನು ಏರತೊಡಗಿದೆವು. ಮಳೆ ಜೋರಾದಂತೆ ಕಲ್ಲುಬಂಡೆಗಳ ನಡುವೆ ನೀರಿಳಿಯತೊಡಗಿ, ದಾರಿಯೆಲ್ಲ ಕೆಸರು–ಕೊಚ್ಚೆಗಳಿಂದ ತುಂಬಿ, ಕಾಲಿಟ್ಟರೆ ಜಾರಿ ಬೀಳುವಂತಾಯಿತು. ಅಲ್ಲಲ್ಲಿ ಕೋಲಿನಿಂದ ಚುಚ್ಚಿ, ನೆಲ ಗಟ್ಟಿಯಾಗಿದೆ ಎಂದು ಪರೀಕ್ಷಿಸುತ್ತ ಮೇಲಕ್ಕೆ ಏರಿ ಹೋಗಬೇಕಾಯಿತು. ಒಂದೆಡೆ, ಕಾಲಿಟ್ಟ ನೆಲ ಜಾರುತ್ತಿದ್ದುದು ಅರಿವಾಗದೆ, ಕಾಲುಜಾರಿ ಉರುಳಿಬಿದ್ದೆ. ನೆಲಕ್ಕೆ ಕೈಕೊಟ್ಟು, ಜಾರಿ ಬೀಳುವುದನ್ನು ತಪ್ಪಿಸಹೊರಟರೆ, ಕೈಯೂ ಜಾರಿತು. ಒಂದೆರಡು ಉರುಳು ಜಾರಿ, ನೆಲದ ಕೆಸರು, ನೀರು ಮೈಗೆಲ್ಲಾ ಮೆತ್ತಿಕೊಂಡಿತು. ನಾನು ಜಾರಿಬಿದ್ದುದನ್ನು ಕಂಡ ಕುದುರೆಯವರು (ಲೋಕಲ್ ಜನ) 'ಬಾಬಾಜಿ! ನಿಮಗೆ ಮೇಲೆ ಹೋಗಲಾಗುವುದಿಲ್ಲ, ಜಾರಿ ಬೀಳಬೇಡಿ' ಎಂದರು. ಅವರ ಮಾತನ್ನು ಕೇಳಿ ನನಗೆ ಆತಂಕ, ಭಯ ಮಿತಿಮೀರಿ, ಎದೆ ಹೊಡೆದುಕೊಳ್ಳತೊಡಗಿತು. 'ಹೇಗಪ್ಪಾ ಮುಂದಿನ ಯಾತ್ರೆ ಮಾಡುವುದು? ಹತ್ತಿರದಲ್ಲಿ ತಂಗಲು ಯಾವ ಸ್ಥಳವೂ ಇಲ್ಲ; ಈಗೇನು ಮಾಡಲಿ?' ಭಯವಾಗಿ ಕಣ್ಣುಕತ್ತಲೆ ಬಂತು. ನನ್ನ ಜೊತೆಗಿದ್ದ ಬ್ರಹ್ಮಚಾರಿ ಶಿವಕುಮಾರ್, ವೇಣು ಮಹಾರಾಜ್ ಇಬ್ಬರೂ ಬೆಟ್ಟದ ಮೇಲಕ್ಕೆ ಏರಿ ಹೋಗಿದ್ದರು. ನಾನು ಕೂಗಿದರೂ ಅವರಿಗೆ ಕೇಳಿಸುವಂತಿರಲಿಲ್ಲ. ಏನು ಮಾಡಬೇಕೆಂದು ದಾರಿ ತೋಚದೆ ನನಗೆ ಅಳುವೇ ಬರುವಂತಾಯಿತು. 'ಬಾಬಾ ಅಮರನಾಥ! ನೀನೇ ಕಾಪಾಡಬೇಕು!' ಎಂದು ಮೊರೆಯಿಟ್ಟೆ. ಹೇಗೋ ಕೋಲೂರಿಕೊಂಡು ಮೇಲಕ್ಕೆ ಹೋಗುವಾಗ ನನ್ನ ಕಷ್ಟವನ್ನು ಅರಿತ ಶಿವಕುಮಾರ್ ಮಹಾರಾಜ್ ಅಲ್ಲೇ ನಿಂತರು. ನಾನು ನಡೆದುದನ್ನೆಲ್ಲ ವಿವರಿಸಿದೆ. 'ಬನ್ನಿ, ಮೇಲೆ ಮೆಡಿಕಲ್ ಕ್ಯಾಂಪಿಗೆ ಹೋಗಿ ಏನಾದರೂ ಮಾಡೋಣ' ಎಂದರು. ಸ್ವತಃ ಅವರೇ ವೈದ್ಯರು. ನನ್ನ ಕೈಗೋ, ಕಾಲಿಗೋ ಏಟುಬಿದ್ದಿದೆಯೋ ಎಂಬುದೂ ನನಗೆ ತಿಳಿಯಲಿಲ್ಲ, ಅಷ್ಟರಮಟ್ಟಿಗೆ ನಾನು ಗಾಬರಿಗೊಂಡಿದ್ದೆ. (ಅದೃಷ್ಟ, ಯಾವುದೇ ಗಂಭೀರ ಗಾಯಗಳಾಗಿರಲಿಲ್ಲ.) ನನ್ನ ಕೈಗಳೆರಡೂ ಮಳೆ ನೀರಿನಲ್ಲಿ ಒದ್ದೆಯಾಗಿ, ಮರಗಟ್ಟಿದ್ದವು. ಆದ್ದರಿಂದ ಒಂದು ಗ್ಲೌಸ್ ಅಗತ್ಯವಾಗಿ ಬೇಕಿತ್ತು. ಗಣೇಶ ಟಾಪ್ ಏರಿದ ಬಳಿಕ ಒಂದು ಅಂಗಡಿಯಲ್ಲಿ ಚಹಾ ಕುಡಿದು, ಕೈ ಬಿಸಿ ಮಾಡಿಕೊಂಡು ಗ್ಲೌಸ್ ಕೊಂಡುಕೊಂಡೆವು. ಅಂಗಡಿಯಿಂದ ಹೊರಬಂದು ನೋಡುತ್ತೇವೆ, ವೇಣು ಮಹಾರಾಜರ ಪತ್ತೆಯಿಲ್ಲ. 'ಇಂಥ ಸಂದರ್ಭದಲ್ಲಿ ಅವರು ಎಲ್ಲಿ ಹೋದರು ಎಂದು ನೋಡುವುದು ಉಚಿತ' ಎಂದೆ ನಾನು. 'ಸರಿ, ಅವರು ಅಲ್ಲೆಲ್ಲಾದರೂ ಇದ್ದಾರೋ ನೋಡಿ ಬರುತ್ತೇನೆ. ನೀವಂತೂ ನಿಲ್ಲಬೇಡಿ, ನಡೆಯುತ್ತಾ ಹೋಗಿ' ಎಂದರು ಶಿವಕುಮಾರ್ ಮಹಾರಾಜ್.

**ಹಿಮ, ಕೆಸರು– ಕೊಚ್ಚೆ : ಪೋಷಪಾತ್ರಿವರೆಗೆ**

ಮುಂದಿನ ದಾರಿ ಹೇಗೆ ನಡೆದೆನೋ! ಹಿಮದ ಮೇಲೆ ಕಾಲಿಟ್ಟರೆ ಜಾರುತ್ತಿತ್ತು. ಜಿಟಿ ಜಿಟಿ ಮಳೆ ಬೇರೆ. ಕೆಲವೆಡೆ ಹಿಮ ಕರಗಿ, ಬಿರುಕು ಬಿಟ್ಟು, ತಳದಲ್ಲಿ ಹರಿಯುತ್ತಿದ್ದ ನೀರು ಕಾಣಿಸುತ್ತಿತ್ತು. 'ಸ್ವಲ್ಪ ಹೊತ್ತಿನಲ್ಲೇ ಹಿಮ ಕರಗಿಹೋಗುತ್ತದೆ. ಅದಕ್ಕೆ ಮೊದಲೇ ಬೇಗಬೇಗನೆ ನಡೆದು ಬಚಾವ್ ಆಗಿ' ಎಂದು ಕುದುರೆಯವನೊಬ್ಬ ಹೇಳಿದ್ದು ಕೇಳಿಸಿತು. ನನ್ನೊಂದಿಗಿದ್ದ ಇತರ ಯಾತ್ರಿಕರಿಗೂ, ನನಗೂ ಆತಂಕವಾಯಿತು. ಹಿಮದ ಹಾದಿ ಸಾಗುತ್ತಿದ್ದಂತೆ ನೋಡಿದೆ, ಒಂದೆಡೆ ಎಲ್ಲಿ ನೋಡಿದರೂ ಹಿಮವೇ! ಅದರಾಚೆಗೆ ಮೋಡ ಮುಸುಕಿದ್ದ ಪರ್ವತದ ಸಾಲುಗಳು. ಅದು ನನ್ನಲ್ಲಿ ಭಯವನ್ನು ಹೆಪ್ಪುಗಟ್ಟಿಸಿತು. ನಿರಂತರ ಗುರುಮಹಾರಾಜರ, ಅಮರನಾಥನ ಹೆಸರು ಹೇಳುತ್ತಾ ಮುಂದುವರಿದೆ. ಒಂದೆಡೆ ನೀರು ಹರಿಯುತ್ತಿತ್ತು – ಕಾಲಿಟ್ಟರೆ ಮೈ ಕೊರೆಯುವ ಚಳಿ. ಅದನ್ನು ದಾಟದೆ ಮುಂದೆ ಹೋಗುವಂತಿಲ್ಲ. ಕಾಲು ಮುಳುಗಿ ಹೋಗುವಷ್ಟು ನೀರಿತ್ತು – ನನ್ನ ಶೂ ಒದ್ದೆಯಾಗಿ, ಶೂವಿನೊಳಗೆ ನೀರು ನುಗ್ಗಿ ಬಿಟ್ಟರೆ ಎಂಬ ಭಯದಲ್ಲಿ ಅಲ್ಲಲ್ಲಿ ಕಲ್ಲು ಕಾಣಿಸುತ್ತಿದ್ದ ಒಂದೆಡೆ ನೀರಿಗಿಳಿದೆ. ಅಯ್ಯೋ, ಶೂವೆಲ್ಲ ಒದ್ದೆಯಾಗಿ, ಒಳಕ್ಕೂ ನೀರು ನುಗ್ಗಿ, ಕಾಲು ಚೀಲವೆಲ್ಲ ಒದ್ದೆಯಾಯಿತು. ಇನ್ನು ಹೇಗೆ ನಡೆಯಲಿ! ಹೇಗೋ ಧೈರ್ಯ ತಾಳಿ ಮುಂದುವರೆದೆ. ಅಷ್ಟರಲ್ಲಿ ಶಿವಕುಮಾರ್ ಕಾಣಿಸಿಕೊಂಡರು. 'ವೇಣು ಮಹಾರಾಜ್ ಎಲ್ಲೂ ಕಾಣಿಸಲಿಲ್ಲ. ಬಹುಶಃ ಮುಂದೆ ಹೋಗಿರಬೇಕು. ಪಂಚತರಣಿಗೆ ಹೋದ ಮೇಲೆ ಅವರನ್ನು ಹುಡುಕೋಣ' ಎಂದರು.



ಹಿಮದ ಹಾದಿ

ಹಿಮದಲ್ಲಿ ನಡೆಯುವುದಾದರೂ ಅಷ್ಟು ಕಷ್ಟವಿರಲಿಲ್ಲ. ಆದರೆ ಕೆಸರು, ಕೊಚ್ಚೆಗಳಿರುವಲ್ಲಿ ಕಾಲಿಟ್ಟರೆ ಸಾಕು ಜಾರಿ ಬೀಳುವಂತಾಗುತ್ತಿತ್ತು. ನಮಗಿದ್ದ ಒಂದೇ ಒಂದು ಆಸರೆಯೆಂದರೆ ಲಾಠಿ ಮಾತ್ರ. ಇಡೀ ದೇಹದ ಭಾರ ಅದರ ಮೇಲೆ ಬೀಳುತ್ತಿತ್ತು. ಸಮತೋಲನ ತಪ್ಪಿ ಒಂದೆರಡು ಬಾರಿ ಜಾರಿ ಬೀಳಹೊರಟಿದ್ದೆ. ಆದರೂ ವಿಶೇಷ ಅನಾಹುತವಾಗದೆ ಮುಂದೆ ಸಾಗಿದೆ. ನಿರಂತರ ಇಳಿಯುತ್ತ ಸಾಗುತ್ತಿದ್ದೆವು. ದೂರದಲ್ಲಿ ಲಂಗರ್ ಕಾಣಿಸುತ್ತಿತ್ತು. ಅದೇ ಪೋಷಪಾತ್ರಿ – ಅಲ್ಲಿಗೆ ಹೇಗಾದರೂ ತಲುಪಿಬಿಟ್ಟರೆ ಬದುಕಿದೆವು; ಆದರೆ ಅಲ್ಲಿಗೆ

ತಲುಪುವಾಗ ಜೀವವೇ ಇಲ್ಲವೆನ್ನುವಷ್ಟು ನಿತ್ರಾಣ. ಮುಂದೆ ಒಂದು ಹೆಜ್ಜೆಯನ್ನೂ ಇಡಲಾಗದು ಎನ್ನುವಂತಾಗಿ ತಲೆಸುತ್ತಿ ಬಂತು.

ಪೋಷಾಪಾತ್ರಿಯ ಲಂಗರ್‌ನಲ್ಲಿ ಖೀರು, ಚಹಾ, ನೀರು ಇವನ್ನೆಲ್ಲ ಸೇವಿಸಿದಾಗ ಜೀವ ಬಂದಂತಾಯಿತು. ಅಲ್ಲೇ ವಿಶ್ರಮಿಸಿಕೊಳ್ಳೋಣವೆಂದರೆ, ಹೆಚ್ಚು ತಡಮಾಡುವಂತಿಲ್ಲ ಎಂದರು ಶಿವಕುಮಾರ್ ಮಹಾರಾಜ್. ತಡವಾದರೆ ಯಾತ್ರಿಕರನ್ನು ಮುಂದೆ ಬಿಡುವುದಿಲ್ಲವಂತೆ ಎಂದರು. ಅವರಿಗಂತೂ ಮಿತಿಮೀರಿದ ಶಕ್ತಿ – ಅದೆಲ್ಲಿಂದ ಬಂತೋ! ಕೊನೆಗೆ ಅಲ್ಲಿನ ಗೇಟ್ ಕೂಡ ದಾಟಿ ಮುಂದುವರಿದೆವು – ಆದರೆ ನನಗೆ ನಡೆಯಲಾಗುತ್ತಿಲ್ಲ. ಎರಡು ಹೆಜ್ಜೆ ಇಡುವಷ್ಟರಲ್ಲಿ ಬೀಳುವಂತಾದೆ. ಅದನ್ನು ನೋಡಿದ ಶಿವಕುಮಾರ್, ಇಬ್ಬರಿಗೂ ಕುದುರೆ ಗೊತ್ತು ಮಾಡಿದರು. ನಾನು ಮೊಟ್ಟಮೊದಲ ಬಾರಿ ಕುದುರೆಯಲ್ಲಿ ಕುಳಿತೆ; ನನಗೋ, ಬಿದ್ದುಹೋಗುವಂತಾಗುತ್ತಿತ್ತು. ಕುದುರೆಯವನು ಹೇಳುತ್ತಿದ್ದ, 'ಗಟ್ಟಿಯಾಗಿ ಕುಳಿತುಕೊಳ್ಳಿ, ಏನೂ ಆಗಲ್ಲ.' ಅವರಿಗೂ ಇದು ಸಾಧಾರಣ ಸಂಗತಿ. ಯಾತ್ರಿಕರನ್ನು ಕುದುರೆಯ ಮೇಲೆ ಸಾಗಿಸುವಾಗ ಹೇಗೆ ಕುಳಿತುಕೊಳ್ಳಬೇಕು ಎಂಬುದನ್ನು ಹೇಳಿಕೊಡಬೇಕು. ಸರಿ, ಕುದುರೆ ಹೊರಟಿತು. ಇನ್ನೇನು ಎಂಟು ಕಿ.ಮೀ ದೂರದಲ್ಲಿ ಪಂಚತರಣಿ ಬರುತ್ತದೆ. ಆದರೆ ನಾಲ್ಕು ಕಿ.ಮೀ ದೂರ ಸಾಗುವಷ್ಟರಲ್ಲಿ ವೇಣು ಮಹಾರಾಜ್ ನಮ್ಮ ಮುಂದೆ ನಡೆದು ಹೋಗುತ್ತಿದ್ದರು. ಅವರನ್ನು ಕಂಡ ಕೂಡಲೇ ನಾವು ಕುದುರೆಯಿಂದಿಳಿದು, ಕುದುರೆಯವನಿಗೆ ಪೂರ್ತಿ ಹಣ ಕೊಟ್ಟು ಕಳುಹಿಸಿ, ಮೂವರೂ ನಡೆಯತೊಡಗಿದೆವು. ಕುದುರೆ ಸವಾರಿಗಿಂತ ನಡಿಗೆಯೇ ಎಷ್ಟೊಂದು ಸುಖಕರ!

**ಪಂಚತರಣಿ**

ಸುತ್ತಲೂ ವಿಶಾಲವಾಗಿ ಹಬ್ಬಿರುವ ಬೆಟ್ಟಗಳು; ನಡುವೆ ವಿಸ್ತಾರವಾದ ಕಣಿವೆ. ಅದೆಂಥ ಭವ್ಯ ದೃಶ್ಯ! ಮನಸ್ಸು ಉನ್ನತ ಭಾವಕ್ಕೇರುತ್ತಿತ್ತು. ನಡೆಯುತ್ತಾ ಪಂಚತರಣಿ ತಲಪುವಾಗ ರಾತ್ರಿ ಎಂಟು ಗಂಟೆ. ಪಂಚತರಣಿ ಪ್ರವೇಶದ್ವಾರದ ಬಳಿ ಪ್ರಕಾಶ್ ಮಹಾರಾಜ್ ಕಾಯುತ್ತ ನಿಂತಿದ್ದರು. ಅವರನ್ನು ಕಂಡು ನಮಗೆ ಅದೆಂಥ ಆನಂದವಾಯಿತೋ! ಕುದುರೆಯಲ್ಲಿ ಬಂದವರೆಲ್ಲ ಸಾಯಂಕಾಲ ಐದಕ್ಕೇ ಅಲ್ಲಿಗೆ ತಲುಪಿದ್ದರು. ಅವರು ನಮಗಾಗಿ ಒಂದು ಟೆಂಟ್ ಬುಕ್ ಮಾಡಿದ್ದರು. ಉಳಿದವರನೆಲ್ಲ ಟೆಂಟ್‌ನಲ್ಲೇ ಭೇಟಿಯಾದೆವು. ಏಳೂ ಮಂದಿ ಮತ್ತೆ ಒಂದಾದಾಗ ನಮಗೆಲ್ಲ ಹೇಳಲಾಗದ ನೆಮ್ಮದಿಯಾಯಿತು. ಆಯಾಸದಿಂದ ಹಾಸಿಗೆಯಲ್ಲಿ ಉರುಳಿಕೊಂಡೆವು.

ಮರುದಿನ (ಜುಲೈ ೧೨, ಅಂದು ನಮಗೆ ಅಮರನಾಥ ದರ್ಶನವಾಗಬೇಕಿತ್ತು) ಇಡೀ ದಿನ ಜಿಟಿಜಿಟಿ ಮಳೆ, ರಾತ್ರಿಯ ತನಕವೂ ಬರುತ್ತಿತ್ತು. ಅಂದು ಯಾತ್ರೆ ಸಾಧ್ಯವಾಗಲೇ ಇಲ್ಲ. ಇನ್ನೊಂದು ದಿನ ತಡವಾಯಿತು. ಮಾರನೇ ದಿನ ಬೆಳಿಗ್ಗೆ ವಾತಾವರಣ ಶುಭ್ರವಾಗಿತ್ತು, ಮಳೆಯೂ ಬರುತ್ತಿರಲಿಲ್ಲ. ಯಾತ್ರೆ



ಪಂಚತರಣಿ

ಹೊರಟಿತು. ಅಲ್ಲಿಂದ ಆರು ಕಿ.ಮೀ ದೂರದಲ್ಲಿ ಅಮರನಾಥನ ಗುಹೆಯಿದೆ. ಮತ್ತೆ ಸಣ್ಣದಾಗಿ ಮಳೆ, ಹಿಮ, ಕೆಸರುಕೊಚ್ಚೆ – ಇವೆಲ್ಲ ಪುನರಾವರ್ತನೆಯಾದಂತೆ ಕಡಿದಾದ ದಾರಿಯಲ್ಲಿ ಏರಿ ಹೋಗಬೇಕಾಯಿತು. ಒಂದು ಬಾರಿ ಜಾರಿ ಬಿದ್ದುಬಿಟ್ಟೆ; ಆದರೆ ಈಗ ಅಷ್ಟೇನೂ ಭಯವಾಗಲಿಲ್ಲ. ಯಾತ್ರೆಯ ನಡುವೆ ಪ್ರಾಣ ಹೋದರೂ ಪುಣ್ಯಕರವಲ್ಲವೆ?

**ಅಮರನಾಥನ ದರ್ಶನ**

ಜುಲೈ ೧೩ ರಂದು ಬೆಳಿಗ್ಗೆ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಅಮರನಾಥನ ಗುಹೆ ಕಾಣಿಸಿತು. ದೂರದಿಂದ ಗುಹೆಯ ದ್ವಾರ ಕಂಡಾಗ ಅದೆಂಥಾ ಆನಂದ! ಸ್ವಾಮಿ ವಿವೇಕಾನಂದರ, ನಿವೇದಿತಾ ಮೊದಲಾದವರ ನೆನಪಾಯಿತು. ಮೆಟ್ಟಿಲನ್ನು ಏರಿದಷ್ಟೂ ಮುಗಿಯುತ್ತಿಲ್ಲ! ಒಂದು ಅಂಗಡಿಯಲ್ಲಿ ನಮ್ಮ ಬ್ಯಾಗ್, ಕ್ಯಾಮೆರಾ, ಮೊಬೈಲ್ ಇವನ್ನೆಲ್ಲ ಬಿಟ್ಟೆವು. ನೈವೇದ್ಯ ಮಾಡಿ, ಪ್ರಸಾದ ಒಯ್ಯಲು ಒಂದು ಪ್ಯಾಕೇಟ್ ಕೊಂಡುಕೊಂಡು, ಮುಂದೆ ನಡೆದೆವು.

ಆಯಾಸದಿಂದ ಕಂಗೆಟ್ಟ ನಮಗೆ ಸಿ.ಆರ್.ಪಿ.ಎಫ್.ನ ಸಿಬ್ಬಂದಿಗಳು ಕೊಟ್ಟ ಬಿಸಿನೀರು ನಿಜವಾಗಿಯೂ ಅಮೃತಸಮಾನವೆನಿಸಿತು. ಮುಂದೆ ಭದ್ರತಾ ತಪಾಸಣೆಯನ್ನು ಹಾದು ಹೋಗಿ ಮೆಟ್ಟಿ



ಅಮರನಾಥ ಗುಹೆಗೆ ಸಮೀಪ